**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **30.10.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2ನೇ ಎದುರುದಾರರರ ಪರಃ ಶ್ರೀ      ವಕೀಲರಿಂದ:</u>**

ಅಪಘಾತದ ಬಗ್ಗೆ ದೂರನ್ನು ಸಿದ್ದೇಗೌಡರವರು ನೀಡಿರುತ್ತಾರೆ. ಸದರಿಯವರು ನನ್ನ ಸಂಬಂದಿಕರಲ್ಲ. ದಿನಾಂಕ 07.10.2022 ರಂದು ಅಪಘಾತವಾಗಿರುತ್ತದೆ. ಅಪಘಾತವಾದಾಗ ನನಗೆ ಪ್ರಜ್ಞೆ ಇರಲಿಲ್ಲ, ಅದ್ದರಿಂದ ದೂರನ್ನು ಯಾವ ದಿನ ನೀಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಅಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ. ಶಸ್ತ್ರ ಚಿಕಿತ್ಸೆಯಾಗಿ ವಾರ್ಡಿಗೆ ಬಂದ ನಂತರ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿ ಹೇಳಿಕೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಆ ದಿನ ಊರಿನ ಒಳಗಡೆ ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದೆ. ಸದರಿ ರಸ್ತೆಯು ಕಿರಿದ್ದಾಗಿತ್ತು ಎಂದರೆ ಸರಿ. ಸದರಿ ರಸ್ತೆಯಲ್ಲಿ ಒಂದು ವಾಹನ ಹೋದರೆ ಮತ್ತೊಂದು ವಾಹನ ಬರಲು ಸಾದ್ಯವಿಲ್ಲ ಎಂದರೆ ಸರಿ. ಕೆಎ-41-ಇಸಿ-6965 ನಂಬರಿನ ವಾಹನವನ್ನು ಆ ದಿನ ನಾನು ಚಾಲನೆ ಮಾಡುತ್ತಿದ್ದೆ. ಅದು ನನ್ನ ಚಿಕ್ಕಪ್ಪನಿಗೆ ಸೇರಿತ್ತು. ನಾನು ಡಿ ಎಲ್ ಹೊಂದಿದ್ದೆ. ಅಪಘಾತವಾದಾಗ ಅದು ಕಳೆದು ಹೋಗಿರುತ್ತದೆ. ಅದು ಬೆಂಗಳೂರಿನ ಜಯನಗರ ಅರ್ ಟಿ ಒ ಕಛೇರಿಗೆ ಸೇರಿದ್ದಾಗಿರುತ್ತದೆ. ಡಿ ಎಲ್ ನಂಬರ್ ಮನೆಯಲ್ಲಿ ಹುಡುಕಿದರೆ ಸಿಗುತ್ತದೆ. ಸದರಿ ನಂಬರನ್ನು ಪಡೆದು ಡಿ ಎಲ್ ನ ಪ್ರತಿಯನ್ನು ಪಡೆಯಲು ಅಗುತ್ತದೆಯೇ ಎಂದರೆ ನೋಡಬೇಕು.

2) ನಾನು ಚಾಲನೆ ಮಾಡುತ್ತಿದ್ದ ವಾಹನಕ್ಕೆ ವಿಮೆ ಇತ್ತೋ ಇಲ್ಲವೋ ಗೊತ್ತಿರುವುದಿಲ್ಲ. ಘಟನಾ ಸ್ಥಳದಲ್ಲಿ ತಿರುವು ಇದ್ದು, ಏಕ ಏಕಿ ಟ್ರಾಕ್ಟರ್ ಬಂದಿರುತ್ತದೆ. ನಾನು ನಿಧಾನವಾಗಿ ಹೋಗುವಾಗ ಟ್ರಾಕ್ಟರ್ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ. ಅಪಘಾತವು ಎದುರುಬದುರು ಅಗಿರುತ್ತದೆ. ಅಪಘಾತದಿಂದ ಟ್ರಾಕ್ಟರ್ ಜಖಂ ಅಗಿರುವುದಿಲ್ಲ. ನನ್ನ ತಪ್ಪಿ ನಿಂದ ಅಪಘಾತವಾಗಿದ್ದು, ಟ್ರಾಕ್ಟರ್ ಚಾಲಕನ ತಪ್ಪಿ ನಿಂದ ಅಗಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಧರಿಸಿದ್ದೆ. ನನ್ನ ಎಡ ಭುಜ, ಎಡತೊಡೆಗೆ ಪೆಟ್ಟಾಗಿತ್ತು. ಮೊದಲು ಬೆಳಕವಾಡಿ ಅಸ್ಪತ್ರೆ ನಂತರ ಸ್ಪಂದನಾ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಮಳವಳ್ಳಿ ಅಸ್ಪತ್ರೆಗೆ ಬಂದಾಗ ಅವರು ಸ್ಪಂದನಾ ಅಸ್ಪತ್ರೆಗೆ ತಿಳಿಸಿರುತ್ತಾರೆ. ನಾನು ದಿನಾಂಕ 07.10.2022 ರಿಂದ 20.10.2022 ರವರೆಗೆ ಸ್ಪಂದನಾ ಅಸ್ಪತ್ರೆಯಲ್ಲಿ ದಾಖಲಾಗಿದ್ದೆ. ಒಂದು

ವರುಷ ಕಳೆದ ನಂತರ ವೀನಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ತೊಡೆಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಸ್ಪಂದನಾ ಅಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿದಾಗ ಸರಿಯಾಗಿ ಮೂಳೆ ಜೋಡಣೆ ಅಗಿಲ್ಲ ಎಂದು ವೀನಸ್ ಅಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಸ್ಪಂದನಾ ಅಸ್ಪತ್ರೆಯ ವೈದ್ಯರು ವೀನಸ್ ಅಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ದಿನಾಂಕ 10.01.2024 ರಿಂದ 16.01.2024 ರವರೆಗ ವೀನಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ್ದ ವೈದ್ಯರ ಹೆಸರು ಸುನೀಲ್ ಅಗಿರುತ್ತದೆ. ನಾನು ಇತ್ತೀಚಿಗೆ 20 ದಿನಗಳ ಹಿಂದೆ ಅಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಆ ಸಂಬಂದವಾಗಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಶಸ್ತ್ರ ಚಿಕಿತ್ಸೆಗೆ 10 ಲಕ್ಷ ರೂಪಾಯಿ ಮತ್ತು ವಾಹನಕ್ಕೆ 1 ಲಕ್ಷ ರೂಪಾಯಿ ಖರ್ಚು ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸ್ಪತ್ರೆಯಲ್ಲಿ ನನ್ನ ಜೊತೆ ನನ್ನ ತಾಯಿ ಇದ್ದರು. ಭವಿಷ್ಯದ ಚಿಕಿತ್ಸೆಗೆ 3 ಲಕ್ಷ ರೂಪಾಯಿ ಖರ್ಚು ಅಗುತ್ತದೆ ಎಂಬ ಸಂಬಂದವಾಗಿ ದಾಖಲು ಹಾಜರುಪಡಿಸಿರುವುದಿಲ್ಲ. ಆ ರೀತಿ ಅವಶ್ಯಕತೆ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ನನ್ನ ಹುಟ್ಟಿದ ದಿನಾಂಕ 23.03.2000 ಅಗಿರುತ್ತದೆ. ಆ ಸಂಬಂದವಾಗಿ ಅದಾರ ಕಾರ್ಡು ಹಾಜರುಪಡಿಸಿರುತ್ತೇನೆ. ನಾನು ನನ್ನ ತಾತನ ಗ್ರಾಮದಲ್ಲಿ ಲೋಡರ್ ಮತ್ತು ಅನ್ ಲೋಡರ್ ಕೆಲಸ ಮಾಡುತ್ತಿದ್ದೆ. ಅದರಿಂದ ಮಾಸಿಕ 25 ರಿಂದ 30 ಸಾವಿರ ರೂಪಾಯಿ ಅದಾಯ ಹೊಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಯಾವುದೇ ವೃತ್ತಿ ಮಾಡುತ್ತಿಲ್ಲ. ನನಗೆ ಸಣ್ಣ ಪುಟ್ಟ ಗಾಯಗಳು ಅಗಿತ್ತು ಎಂದರೆ ಸರಿಯಲ್ಲ. ಅಹಾರ ಅಗಿಯಲು ಅಗುವುದಿಲ್ಲ ಮತ್ತು ನಡೆಯಲು ಅಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ವೈವಾಹಿಕ ಜೀವನಕ್ಕೆ ತೊಂದರೆ ಅಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಾಹನ ಜಖಂ ಅದ ಬಗ್ಗೆ ಪರೀಕ್ಷೆ ಮಾಡಿಸಿ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರ ಚಾಲಕನ ತಪ್ಪಿ ನಿಂದ ಅಪಘಾತವಾಗಿಲ್ಲ ನನ್ನ ತಪ್ಪಿ ನಿಂದ ಅಗಿದೆ ಎಂದರೆ ಸರಿಯಲ್ಲ. ಟ್ರಾಕ್ಟರನ್ನು ಮಹದೇವಸ್ವಾ ಮಿ ಎಂಬ ಚಾಲಕ ಚಾಲನೆ ಮಾಡುತ್ತಿದ್ದರು. ಸದರಿಯವರು ಧ್ಯಾವಪಟ್ಟಣ ಗ್ರಾಮದವರು ಅಗಿರುತ್ತಾರೆ. ಅವರು ನನ್ನ ಪರಿಚಯಸ್ಥರು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 1ನೇ ಎದುರುದಾರರ ಚಾಲಕನ ತಪ್ಪಿ ನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ